

ಕತೆಯೆಂದು ನಂಬುತ್ತಾ, ನನ್ನನ್ನೇ ಸುಖವೆಂದು ನಂಬುತ್ತಾ, ನಂಬುತ್ತಾ, ಕತೆಗಳ ಹುಚ್ಚಿನಿಂದ ಮೊದಲು ಹೊರಗೆ ಬಂದುಬಿಡು...'

ಗಿರಿಯ ಮನಸ್ಸಿನ ಹೊಲದಲ್ಲಿ ಆ ಹೆಣ್ಣು ಪ್ರೇಮದ ಬೀಜ ಬಿತ್ತಿದ್ದಾಳೆ. ಬೀಜ ಮೆಲ್ಲಮೆಲ್ಲನೆ ಮೊಳಕೆಯೊಡೆಯುತ್ತಿದೆ. ಸುಗಂಧ ಬೀರುವ ಒಂದು ಗಿಡವಾಗಿ ರೂಪದಲ್ಲಿ ವಿಕಸಿತವಾಗುತ್ತಾ ಇದೆ. ಈಗ ಆ ಗಿಡ ಎಷ್ಟು ದೊಡ್ಡದಾಗಿದೆ; ಅದೆಷ್ಟು ಸಶಕ್ತವಾಗಿದೆಯೆಂದರೆ ಅದನ್ನು ಕಿತ್ತೆಸೆಯಲು ಸಾಧ್ಯವಿಲ್ಲವಾಗಿದೆ. ಈಗೀಗ ಗಿರಿಯ ಜೀವನ ಅವನದಾಗಿಲ್ಲ. ಅದರ ಮೇಲೆ ಆ ಹೆಣ್ಣಿನ ಅಧಿಕಾರ ನಿರಂತರವಾಗಿ ಹೆಚ್ಚಾಗುತ್ತಿದೆ. ಗಿರಿಯ ಕನಸುಗಳು ಮೂಟೆಗಳಾಗಿ ಭಾರವನ್ನು ಹೊರಲಾರದವನಾಗಿದ್ದಾನೆ.

ಇರುಳಂತೂ ಸರಿ. ಆ ಹೆಣ್ಣು ಅವನ ಜೊತೆ ಸೇರುತ್ತಲೇ ಇದ್ದಳು. ಆತ ಕಳೆದುಕೊಳ್ಳುತ್ತಲೇ ಇದ್ದ. ಗಿರಿ ಹಗಲಲ್ಲೂ ಆ ಹೆಣ್ಣಿನ ಸಾಕ್ಷಾತ್ಕಾರಕ್ಕಾಗಿ ಹಪಹಪಿಸುತ್ತಿದ್ದ. ಆಗ ಆತ ತನ್ನ ಕಣ್ಣುಗಳನ್ನು ಬಲವಂತವಾಗಿ ಮುಚ್ಚಿಕೊಳ್ಳ ಬೇಕಾಗುತ್ತಿತ್ತು. ಆಗೆಲ್ಲ ಹೆಣ್ಣು ಆತನ ಮುಂದೆ ಪ್ರತ್ಯಕ್ಷವಾಗುತ್ತಿದ್ದಳು. ಆಕೆಯ ಪ್ರೇಮದ ಕೈಗಳು ಅವನನ್ನು ತಬ್ಬಿಕೊಳ್ಳುತ್ತಿದ್ದವು. ಅವನೊಳಗೆ ಕುದಿಯುತ್ತಿದ್ದ ದಾಹಕ್ಕೆ ಬೇಯುತ್ತಿದ್ದ. ಪ್ರೀತಿ ಪ್ರೇಮವಾಗಿ; ಪ್ರೇಮ ದಾಹ ಆಗಿ; ದಾಹ ಕಾಮ ಆಗಿ; ಆ ಹೆಣ್ಣಿನೊಳಗೆ ಕೊನೆ ಕೊನೆಗೆ ಅವನೇ ಇಲ್ಲವಾಗುತ್ತಿದ್ದ!

**ಕತೆ**

ಅದೊಂದು ಪರ್ವ ದಿನ. ಗಿರಿಯ ಮನೆ ತನಕ ಮಠದ ಸ್ವಾಮಿಗಳು ಬಂದಾಗ ಒಂದು ವಿಚಿತ್ರ ಘಟನೆ ನಡೆಯಿತು. ಗಿರಿಯ ತಾಯಿ ಸ್ವಾಮಿಗಳ ಕೈಗೆ ಒಂದು ಕಾಗದವನ್ನು ಕೊಟ್ಟರು. ಆ ಕಾಗದದಲ್ಲಿ ಹೀಗೆ ಬರೆದಿತ್ತು:

'ಸ್ವಾಮಿಗಳೇ... ನನ್ನ ಮಗನಿಗೆ ಏನೋ ಆಗಿದೆ'. ಸ್ವಾಮಿಗಳಿಗೆ ಹೃದಯ ಭಾರವಾಯಿತು, ಮನಸ್ಸೂ. ಸ್ವಾಮಿ ಹೊರಟು ಹೋದ ನಂತರ ತಾಯಿ ವಿಷಾದದಿಂದ ಗಿರಿಯತ್ತ ನೋಡಿದರು. ಆತನ ಮುಖ ಕಳಾಹೀನವಾಗಿತ್ತು. ತಾಯಿ ಮಗನ ಮುಖ ನೋಡುವ ಪ್ರಯತ್ನ ಮಾಡಲಿಲ್ಲ. ಅರ್ಥವಾಗದ ವಿಶ್ಲೇಷಿಸಲಾಗದ ಒಂದು ಗಾಢ ವಿಷಾದದ ಛಾಯೆ ಗಿರಿಯ ಮುಖದ ಮೇಲೆ ಅಚ್ಚೊತ್ತಿದಂತಿತ್ತು. ಭ್ರಮೆ ಆತನ ಮನಸ್ಸಿನಾಳದಲ್ಲಿ ಅವಿತಿತ್ತು. ಗಿರಿಯ ಸ್ಥಿತಿ ಒಂದು ತೊಗಲು ಬೊಂಬೆಯಂತೆ ಆಗುತ್ತಿತ್ತು. ಮಠದ ಸ್ವಾಮಿಗಳು ಹೊರಟು ಹೋದರು. ಗಿರಿ ತನ್ನ ಕೊಠಡಿಯ ಕಿಟಕಿಯ ಬಳಿ ನಿಂತು ಹೊರಗೆ ದೃಷ್ಟಿ ನೆಟ್ಟ. ಹೊರಗೆ ಮೌನವಿತ್ತು ಒಳಗೂ. ಬಹಳ ವೇಗವಾಗಿ ಕಳಚಿಕೊಳ್ಳುತ್ತಿದ್ದ ಜೀವನದ ಸುಖ ಸಂತೋಷಗಳು ಹಾಗೂ ಸುಖ ಸ್ವಪ್ನಗಳು ಗಿರಿಯನ್ನು ಅಸ್ವಸ್ಥನಾಗಿಸಿತು. ಆತನೊಳಗೆ ಇನ್ನೂ ಕತ್ತಲೆಯ ದಾಹ ಗಾಢವಾಗುತ್ತಿತ್ತು. ಪ್ರೀತಿ ಮತ್ತು ಪ್ರೇಮದ ಮುಳ್ಳಿನ ಬೇಲಿಯಿಂದ ಸುತ್ತಲ್ಪಟ್ಟ ಗಿರಿಗೆ ಹೆಸರಾಂತ ಕತೆಗಾರನಾಗುವುದು ಈಗ ಅಸಾಧ್ಯವೆನಿಸುತ್ತಿತ್ತು. ಆತ ಅಸಾಧ್ಯ ಜೀವನದ ಈ ದೃಷ್ಟಿಯನ್ನು ಮತ್ತೆ ಹೆಚ್ಚು ಹೊತ್ತು ಅನುಭವಿಸಲು ಇಷ್ಟಪಡಲಿಲ್ಲ. ಗಿರಿ ಸುಮ್ಮನೆ ಒಂದು ಹಾಸಿಗೆಯ ಮೇಲೆ ಬಿದ್ದುಕೊಂಡ. ಆಗ ಭ್ರಮೆಯ ಪೊರೆ ಕಳಚಿಕೊಂಡಿತು! ಒಂದು ಕತ್ತಲೆಯ ಹಾಗೂ ಕೊನೆಯಿಲ್ಲದ ಪಲ್ಲಂಗದ ತುಂಬಾ ವಿಚಿತ್ರ ಹೆಣ್ಣುಗಳು... ವಿಚಿತ್ರ ಗಂಡುಗಳ ದೇಹಗಳು ಹೆಣೆಯುತ್ತಿದ್ದವು... ಬಿಗಿದಪ್ಪಿಕೊಂಡು ನರಳುತ್ತಿದ್ದವು. ಅವುಗಳ ನಡುವೆ ಬಿದ್ದು ಒದ್ದಾಡುವಂತೆ ಗಿರಿಗೆ ಭಾಸವಾಯಿತು. ಆಗಲೇ ಆಕಸ್ಮಿಕವಾಗಿ ಯಾರದೋ ಕೈ ಸ್ಪರ್ಶ!

ಈಗ ಗಿರಿಯ ಕಣ್ಣುಗಳು ತೆರೆದವು.

ಆತನ ಎದುರು ಮಠದ ಸ್ವಾಮಿಗಳು ನಿಂತಿರುವುದನ್ನು ಕಂಡು ಬೆಚ್ಚಿದ! ಸ್ವಾಮಿ ಹೇಳಿದರು:

'ಗಿರಿ... ನಿನಗೆ ಏನಾಗುತ್ತಿದೆ...?'

'ಗೊತ್ತಿಲ್ಲ'

'ನಿನ್ನ ಆರೋಗ್ಯ ಸರಿಯಿಲ್ಲವೆ...?'

'ಗೊತ್ತಿಲ್ಲ'

'ಮತ್ತೇನು ಗೊತ್ತಿದೆ...?'

'ಗೊತ್ತಿಲ್ಲ..'

'ನಿನ್ನಂಥ ಒಳ್ಳೆಯ ಮನಸ್ಸಿನ ಕತೆಗಾರನಿಗೆ ಬಂದಂತಹ ಸ್ಥಿತಿಯನ್ನು ನೋಡಿ ನನಗೆ ಬಹಳ ವೇದನೆಯಾಗುತ್ತಿದೆ.'

'ನನಗೂ...'

'ನನಗೆ ತುಂಬಾ ಕಷ್ಟವಾಗುತ್ತಿದೆ...'

'ನನಗೂ...'

'ನಿನಗೆ ನಿಜವಾಗಿ ಏನು ಬೇಕು...?'

'ಏನೋ ಬೇಕು...'

'ಅದೇ... ಏನು ಅಂತ ಹೇಳು...'

'ಆ ಹೆಣ್ಣು ಬೇಕು...'

'ಯಾವ ಹೆಣ್ಣು...?'

'ಅದೇ ಹೆಣ್ಣು!'

'ಹೇಳು ಗಿರಿ... ಯಾರು ಆ ಹೆಣ್ಣು...?'

'ಅದು ಗೊತ್ತಿಲ್ಲ...'

'ಮತ್ತೆ...?'

'ಆ ಹೆಣ್ಣನ್ನು ಒಮ್ಮೆ ನೋಡಿದ್ದೇನೆ...'

'ಎಲ್ಲಿ ನೋಡಿದೆ?'

'ನಿಮ್ಮ ತೋಟದ ಬೇಲಿಯ ದಣಪೆಯ ಬಳಿ...'

'ಯಾವಾಗ...?'

'ಅಂದೊಮ್ಮೆ ನಿಮ್ಮ ಆಶೀರ್ವಾದ ಪಡೆಯಲು ಕಾಲಿಗೆ ಎರಗಿ ಎದ್ದು ನಿಂತಾಗ ಆ ಹೆಣ್ಣನ್ನು ನೋಡಿದೆ.'

'ನಮ್ಮ ಮಠದ ತೋಟದಲ್ಲಿ ಕೆಲಸ ಮಾಡುವವಳೇ...?'

'ಅದೂ ಗೊತ್ತಿಲ್ಲ...'

'ನೀನು ಅವಳನ್ನು ಒಮ್ಮೆ ನೋಡಿದ್ದಿ ಅಂತ ಹೇಳುತ್ತಿದ್ದಿಯಲ್ಲ... ಹಾಗಾದರೆ ಆ ಹೆಣ್ಣಿನ ಪರಿಚಯ ಹೇಗಾಯಿತು...?'

'ಆ ಹೆಣ್ಣು ದಿನಾ ರಾತ್ರಿ ನನ್ನ ಜೊತೆಗೇ ಇರುತ್ತಾಳೆ...'

'ಓ ಮೈ ಗಾಡ್! ನಿನ್ನ ಬಳಿಗೆ ದಿನಾ ರಾತ್ರಿ ಬರುತ್ತಾಳೆಯೇ?'

'ಇಲ್ಲ, ಕನಸಿನಲ್ಲಿ ದಿನಾ ಬರುತ್ತಾಳೆ'

'ಸರಿಯಾಗಿ ಹೇಳು'

'ಆಕೆ ನಿಮ್ಮ ತೋಟದಲ್ಲಿ ಕೆಲಸ ಮಾಡುವ ಆಳುಗಳ ಜೊತೆ ನನ್ನತ್ತ ನಗುತ್ತಾ ಹೋಗಿದ್ದನ್ನು ನಾನು ಕಣ್ಣಾರೆ ನೋಡಿದ್ದೇನೆ. ಅನಂತರ ದಿನಾ ರಾತ್ರಿ ಬಂದು ನನ್ನ ಬಳಿ ಬಾ... ಕತೆಗಳನ್ನು ಬರೆಯುವುದು ಬಿಟ್ಟು ಬಾ' ಎಂದು ನನ್ನೊಂದಿಗೇ ಬಹಳ ಹೊತ್ತು ಇರುತ್ತಾಳೆ...'

'ಇಲ್ಲ! ಅಂಥ ಹೆಣ್ಣು ನಮ್ಮ ತೋಟದ ಕೆಲಸದ ಆಳುಗಳ ಜೊತೆಯಿಲ್ಲ'

'ಇದ್ದಾಳೆ!'

'ಇಲ್ಲ! ಎಲ್ಲೋ ನಿನ್ನ ಭ್ರಮೆ! ನಿನ್ನ ಈಗಿನ ಮನಸ್ಥಿತಿಯಲ್ಲಿ ವಿವೇಕ ಕಳೆದುಕೊಂಡಿದ್ದೀಯ. ನಿನಗೆ ಉಳಿದಿರುವುದು ಒಂದೇ ದಾರಿ. ಆತ್ಮವಿಮರ್ಶೆಗೆ ಶರಣಾಗುವುದಕ್ಕೆ ಏಕಮಾತ್ರ ಉಪಾಯವೆಂದರೆ ಅದು ನಿನ್ನ ಬರವಣಿಗೆ. ಸಾಹಿತ್ಯ ಮಾತ್ರ! ಗಿರಿ, ನೀನು ಕತೆಗಳನ್ನು ಬರೆಯುತ್ತಾ ಹೋಗು. ಮನಸ್ಸಿನ ದುಃಖ ಮರೆಯಲು ಪ್ರಯತ್ನಿಸು. ಅದಕ್ಕೆ ಮೊದಲು ನೀನು ನಮ್ಮ ಮಠಕ್ಕೆ ಬಾ. ನಮ್ಮ ತೋಟದ ಆಳುಗಳನ್ನೆಲ್ಲಾ ಕರೆದು ವಿಚಾರಿಸುತ್ತೇನೆ. ನೀನೂ ಎಲ್ಲರನ್ನೂ ನೋಡು. ಆಗ ನೀನು ನೋಡಿದ ಆ ಹೆಣ್ಣು ಯಾರೆಂದು ಗುರುತು ಹಿಡಿಯಬಹುದು...'

ಸ್ವಾಮಿಗಳ ಮಾತಿನಿಂದ ಗಿರಿ ಸ್ವಸ್ಥಚಿತ್ತನಾದ. ಸ್ವಾಮಿಯ ಮಠಕ್ಕೆ ಹೋಗುವ ವಿಚಾರದಿಂದ ಗಿರಿಯ ಮುಖದಲ್ಲಿ ಮುಗುಳುನಗೆ ಮೂಡಿತು. ಆತ ಸ್ವಾಮಿಗಳ ಜೊತೆ ಮಧುಪುರಕ್ಕೆ ಹೊರಟ. ಅವರು ಕಾರಿನಲ್ಲಿ ನಿಧಾನವಾಗಿ ಹೊರಟರು. ಮಠದ ತೋಟದ ಕೆಲಸದ ಆಳುಗಳನ್ನು ಸ್ವಾಮಿ ಕರೆಸಿದರು. ಏಳೆಂಟು ಮಂದಿ ಹೆಣ್ಣುಗಳೂ, ಗಂಡಸರೂ, ಹೆಂಗಸರೂ ಇದ್ದರು. ಗಿರಿಯನ್ನು ಪರಿಚಯಿಸಿದರು. ಆತನನ್ನು ಕತೆಗಾರನೆಂದೂ, ನಿಮ್ಮನ್ನೆಲ್ಲಾ ನೋಡಿ ಪರಿಚಯ ಬೆಳೆಸಿಕೊಳ್ಳಲು ಆಸಕ್ತಿಗೊಂಡಿರುವನೆಂದೂ ತಿಳಿಸಿದರು ಸ್ವಾಮಿ. ಅನಂತರ ಯಾವುದೋ ತುರ್ತಿನ ಫೋನ್ ಕರೆ ಬಂದಿದ್ದರಿಂದ ಸ್ವಾಮಿ ಮಠದ ತಮ್ಮ ಕೊಠಡಿಗೆ ಹೊರಟು ಹೋದರು. ಸ್ವಾಮಿ ಅತ್ತ ಹೋಗುತ್ತಲೇ ಗಿರಿಯ ಮನಸ್ಸು, ಆತನ ಆ ಹೆಣ್ಣಿನ ಶೋಧನೆಗೆ ಎಲ್ಲರ ಕಡೆ ಸುತ್ತತೊಡಗಿತು. ಅವರೆಲ್ಲರೂ ಅನಂತರ ನಮಸ್ಕರಿಸಿ ಹೊರಟುಹೋದರು.

ಈಗ ಗಿರಿಯಂತೂ ಒಂಟಿ. ಆ ಹೆಣ್ಣು ಆತನ ಸಮೀಪವೇ ಇದ್ದಾಳೆ ಮತ್ತು ಎಲ್ಲೋ ಕದ್ದು ಮುಚ್ಚಿ ಆತನ ಎಲ್ಲಾ ಚಟುವಟಿಕೆಗಳನ್ನು ಬಹಳ ಗಮನವಿಟ್ಟು ನೋಡುತ್ತಿದ್ದಾಳೆಂಬ ಭ್ರಮೆಯಲ್ಲೇ ತೇಲಾಡುತ್ತಿದ್ದ. ಆಗಾಗ್ಗೆ ಮಿಂಚಿನಂತೆ ಆ ಹೆಣ್ಣಿನ ಕಣ್ಣುಗಳು ಆತನ ಮುಂದೆ ಸಂಚಿನಂತೆ ಹೊಳೆಯುತ್ತಿದ್ದವು. ಮಠದ ಸ್ವಾಮಿಯ